**ದಿನಾಂಕ 27-11-2021 ರಂದು ಮಧ್ಯಾಹ್ನ 3.00 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 50ನೇ ಸಭೆಯ ನಡವಳಿಗಳು:**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, | ಸದಸ್ಯರು | ವರ್ಚುವಲ್ |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ಕೊಟ್ರಪ್ಪ ಬಿ. ಕೊರೇರ, ರಾಯಚೂರು | ಸದಸ್ಯರು | ಭೌತಿಕ |
| 5. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ವರ್ಚುವಲ್ |
| 6. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ಭೌತಿಕ |
| 7. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 8. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 9. | ಡಾ. ಎಂ.ಜಿ. ಪಾಟೀಲ್, ಶಿಕ್ಷಣ ನಿರ್ದೇಶಕರು, ಕೃವಿವಿ., ರಾಯಚೂರು | ಆಹ್ವಾನಿತರು | ಭೌತಿಕ |
| 10. | ಡಾ. ಎಂ. ವೀರನಗೌಡ, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಕೋವಿಡ್-19 ಸಾಂಕ್ರಾಮಿಕ ರೋಗದ ನಿಯಂತ್ರಣಾ ಕ್ರಮವಾಗಿ 50ನೇ ಸಭೆಯನ್ನು ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸುತ್ತಾ, ಹಾಜರಿದ್ದ ಎಲ್ಲಾ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ತರಾಯಿಸಲಾಯಿತು:

| | |
|---|---|
| **ಐಟಂ-1** | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 49 ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು.**<br>**ಠರಾವು:**<br>ದಿನಾಂಕ 08-09-2021 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 49ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸಲಾಯಿತು ಹಾಗೂ ನಡವಳಿಗಳ ಐಟಂ ಸಂ. 10 ರನ್ನು ಈ ಕೆಳಕಂಡಂತೆ ಕೊಂಚ ಮಾರ್ಪಡು ಮಾಡಲು ಸಭೆಯು ನಿರ್ಣಯಿಸಿತು :<br>**ಐಟಂ ಸಂಖ್ಯೆ 10:. ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದ ಮಾಹಿತಿ ಪರಿಷ್ಕರಣೆ ಹಾಗೂ ಉನ್ನತಿಕರಿಸಲು ಅನುಮೋದನೆ ನೀಡುವ ಕುರಿತು**<br>**ಠರಾವು:**<br>ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದ ಮಾಹಿತಿ ಪರಿಷ್ಕರಣೆ ಹಾಗೂ ಉನ್ನತೀಕರಣದ ಕಾರ್ಯವನ್ನು **ರೂ. 1.25 ಕೋಟಿಗಳ** ಅಂದಾಜು ಮೊತ್ತದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯದ ಮಾಹಿತಿ ಪರಿಷ್ಕರಣೆ ಹಾಗೂ ಉನ್ನತೀಕರಣದ ಕಾರ್ಯವನ್ನು ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.<br>**(ಕ್ರಮ : ಕುಲಸಚಿವರು / ವಿಸ್ತರಣಾ ನಿರ್ದೇಶಕರು)** |

| | |
|---|---|
| ಐಟಂ–2 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 49 ಸಭೆಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>**ಠರಾವು:**<br>ದಿನಾಂಕ 08–09–2021 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 49ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು. |
| ಐಟಂ–3 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೋಂದನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಹನ್ನೋಂದನೇಯ ಘಟಿಕೋತ್ಸವದಲ್ಲಿ ಸ್ನಾತಕ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ರ ಕಲಂ 13(2)(viii) ರನ್ವಯ ಸ್ನಾತಕ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| ಐಟಂ–4 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೋಂದನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಮಾಡಲು ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಹನ್ನೋಂದನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಯಾದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| ಐಟಂ–5 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೋಂದನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡಲು ಅನುಮೋದನೆ ಕುರಿತು.**<br>**ಠರಾವು:**<br>ವಿಸ್ತೃತ ಚರ್ಚೆಯ ನಂತರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಹನ್ನೋಂದನೇಯ ಘಟಿಕೋತ್ಸವದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ **23** ಕೃವಿವಿ ಬಂಗಾರದ ಪದಕಗಳು ಮತ್ತು **03** ದಾನಿಗಳ ಬಂಗಾರದ ಪದಕಗಳು, ಸ್ನಾತಕ ವಿದ್ಯಾರ್ಥಿಗಳಿಗಾಗಿ **02** ಕೃವಿವಿ ಬಂಗಾರದ ಪದಕಗಳು, **04** ಕೃಷಿ / ಕೃಷಿ ತಾಂತ್ರಿಕ ಮಹಾವಿದ್ಯಾಲಯಗಳ ಚಿನ್ನದ ಪದಕಗಳು, **17** ದಾನಿಗಳ ಬಂಗಾರದ ಪದಕಗಳು ಹಾಗೂ **02** ನಗದು ಬಹುಮಾನ/ ಬಹುಮಾನಗಳನ್ನು ಪಡೆಯುವ ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳ ಯಾದಿಯನ್ನು ರಾಯಚೂರಿನ ವಿದ್ಯಾವಿಷಯಕ ಪರಿಷತ್ತಿನ 21ನೇ ಸಭೆಯಲ್ಲಿ ಪರಿಶೀಲಿಸಿ ಶಿಫಾರಸ್ಸು ಮಾಡಿದ್ದನ್ನು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 13(2)(viii) ರನ್ವಯ ಬಂಗಾರದ ಪದಕಗಳು ಹಾಗೂ ನಗದು ಬಹುಮಾನ/ ಬಹುಮಾನಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |

**ಐಟಂ–6**

**ಡಾ. ಸುಹಾಸ್ ಎಲ್‌ಶೆಟ್ಟಿ ನಿವೃತ್ತ, ಪ್ರಧಾನ ವಿಜ್ಞಾನಿ (ಕೃಷಿ ಕೀಟಶಾಸ್ತ್ರ) ಮತ್ತು ಡಾ. ಬಸವರಾಜ್.ವಿ. ಪಾಟೀಲ್, ಮಾಜಿ ಕುಲಪತಿಗಳು, ಕೃವಿವಿ., ರಾಯಚೂರು ಇವರ ಹೆಸರಿನಲ್ಲಿ ಬಂಗಾರದ ಪದಕವನ್ನು ಸ್ಥಾಪಿಸುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ,. ಕಲಬುರಗಿ ಮಹಾವಿದ್ಯಾಲಯದ ಸ್ನಾತಕ ವಿದ್ಯಾರ್ಥಿಗಳಲ್ಲಿ ಕೃಷಿ ಕೀಟಶಾಸ್ತ್ರ ವಿಷಯದಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗೆ ಡಾ. ಸುಹಾಸ್ ಎಲ್‌ಶೆಟ್ಟಿ ನಿವೃತ್ತ, ಪ್ರಧಾನ ವಿಜ್ಞಾನಿ (ಕೃಷಿ ಕೀಟಶಾಸ್ತ್ರ) ಮತ್ತು ಡಾ. ಬಸವರಾಜ್.ವಿ. ಪಾಟೀಲ್, ಮಾಜಿ ಕುಲಪತಿಗಳು, ಕೃವಿವಿ., ರಾಯಚೂರು ಇವರ ಹೆಸರಿನಲ್ಲಿ ಬಂಗಾರದ ಪದಕವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಹನ್ನೊಂದನೇ ಘಟಿಕೋತ್ಸವದಿಂದ ಅನ್ವಯವಾಗುವಂತೆ ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

**(ಕ್ರಮ : ಕುಲಸಚಿವರು)**

**ಐಟಂ–7**

**ಶ್ರೀ ಸಂತೋಷ್ ಎಸ್. ನಾಗರಾಳ್, ವಕೀಲರು, ಬೆಂಗಳೂರು ಇವರನ್ನು ರಾಯಚೂರು ಕೃವಿವಿ.,ಯ ವಕೀಲರ ಯಾದಿಯಲ್ಲಿ ಸೇರಿಸಲು ಅನುಮೋದನೆ ನೀಡುವ ಕುರಿತು.**

**ಠರಾವು:**

ಚರ್ಚೆಯ ನಂತರ, ಬೆಂಗಳೂರು ಉಚ್ಛ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ದಾವೆಗಳನ್ನು / ಪ್ರಕರಣಗಳನ್ನು ನಿರ್ವಹಿಸಲು ಅನುಕೂಲವಾಗಲು ಶ್ರೀ ಸಂತೋಷ್ ಎಸ್. ನಾಗರಾಳ್, ವಕೀಲರು, ಬೆಂಗಳೂರು ಇವರ ಹೆಸರನ್ನು ವಿಶ್ವವಿದ್ಯಾಲಯದ ವಕೀಲರ ಯಾದಿಯಲ್ಲಿ ಸೇರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**(ಕ್ರಮ : ಕುಲಸಚಿವರು)**

**ಐಟಂ–8**

**ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರತಿ ಉಪಕರಣಗಳ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the Equipment | Name of the Department/ Project | Qty | Approximate Cost in (Rs. Lakhs) | Funding Agency with allotted Ab. A/c. No. |
|---|---|---|---|---|---|
| 1. | Water soluble fertilizer (Urea-Phosphate, NPK:17-44-00) | ZARS, Kalaburagi. | 40 tons | 32.80 | 8624/502<br>Production Unit of Pulse magic |
| 2. | Salicylic acid laboratory grade | ZARS, Kalaburagi. | 3000 kg | 10.50 | 8624/502<br>Production Unit of Pulse magic |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಐಟಂ–9**

**ಬೀಜ ಘಟಕ, ಕೃವಿವಿ., ರಾಯಚೂರಿನಲ್ಲಿ 2021–22ನೇ ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳಿಗೆ ಬೇಕಾಗುವ ಹಣಕಾಸಿನ ಅನುಮೋದನೆ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಮುಖ್ಯ ಆವರಣದ

ಬೀಜ ಘಟಕದಲ್ಲಿ ಹಾಗೂ ವಿವಿಧ ಕೇಂದ್ರಗಳಲ್ಲಿ 2021–22 ನೇ ಸಾಲಿನಲ್ಲಿ ವಿವಿಧ ಬೆಳೆಗಳ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ರೈತರ ಸಹಭಾಗಿತ್ವ ಯೋಜನೆಯಡಿ ಅನುಷ್ಠಾನಗೊಳಿಸಲು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರ. ಸಂ | ಹಣಕಾಸಿನ ಮೂಲ | ಪ್ರಮಾಣ (ಕ್ವಿಂ) | ಮೊತ್ತ (ರೂ. ಲಕ್ಷಗಳಲ್ಲಿ) | ಆವರ್ತನಿಧಿ / ಲೆಕ್ಕ ಶೀರ್ಷಿಕೆ ಸಂಖ್ಯೆ. |
|---|---|---|---|---|
| 1. | ಬೀಜ ಆವರ್ತನಿಧಿ, ಬೀಜ ಘಟಕ, ಕೃವಿವಿ., ರಾಯಚೂರು | 3676 | 326.76 | 8637 |
| 2. | ಬೀಜ ಯೋಜನೆ (ಬೇಳೆ ಕಾಳು), ಬೀಜ ಘಟಕ, ಕೃವಿವಿ., ರಾಯಚೂರು | 1755 | 131.30 | 8621 |
| 3. | ಬೀಜ ಕೇಂದ್ರ ಯೋಜನೆ (ಸೋಯಾ ಅವರೆ), ಬೀಜ ಘಟಕ, ಕೃವಿವಿ., ರಾಯಚೂರು | 500 | 45.68 | 8635 |
| 4. | ಬೀಜ ಯೋಜನೆ (ಬೇಳೆ ಕಾಳು), ಕೃಷಿ ವಿಜ್ಞಾನ ಕೇಂದ್ರ, ಬೀದರ್ | 850 | 72.24 | KVK, RF & Seed Hub RF |
| 5. | ಬೀಜ ಯೋಜನೆ (ಬೇಳೆ ಕಾಳು), ಕೃಷಿ ವಿಜ್ಞಾನ ಕೇಂದ್ರ, ರದ್ದೇವಾಡಗಿ | 730 | 51.86 | KVK, RF & Seed Hub RF |
| 6. | ಬೀಜ ಆವರ್ತನಿಧಿ, ವಲಯ ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿ | 1100 | 93.91 | 8576 |
| | ಒಟ್ಟು | **8611** | **721.75** | |

**(ಕ್ರಮ : ವಿಶೇಷಾಧಿಕಾರಿಗಳು (ಬೀಜ))**

**ಐಟಂ–10** **2020–21 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಪ್ರೋತ್ಸಾಹ ಧನ ನೀಡಲು ಹಣಕಾಸಿನ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, 2020–21ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಪ್ರೋತ್ಸಾಹ ಧನವನ್ನು ಈ ಕೆಳಕಂಡಂತೆ ಕೋಷ್ಠಕದಲ್ಲಿ ತೋರಿಸಿದಂತೆ ಅರ್ಹ ರೈತರಿಗೆ / ಸಂಸ್ಥೆಗಳಿಗೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| **ಕ್ರ.ಸಂ.** | **ಹಣಕಾಸಿನ ಮೂಲ** | **ಪ್ರಮಾಣ (ಕ್ವಿಂ)** | **ಮೊತ್ತ (ಲಕ್ಷಗಳಲ್ಲಿ)** | **ಆವರ್ತ ನಿಧಿ / ಲೆಕ್ಕ ಶೀರ್ಷಿಕೆ** |
|---|---|---|---|---|
| 1. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ **(ಮುಂಗಾರು ಹಂಗಾಮು)** | 1540.35 | 77.01750 | 7411/591 |
| 2. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ **(ಹಿಂಗಾರು ಹಂಗಾಮು)** | 787.70 | 39.38500 | 7411/591 |

**(ಕ್ರಮ : ವಿಶೇಷಾಧಿಕಾರಿಗಳು (ಬೀಜ))**

**ಐಟಂ–11** **ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಮೌಲ್ಯಕ್ಕೆ ಇ–ಟೆಂಡರ್ ಮುಖಾಂತರ ಬೀಜ ಸಂಸ್ಕರಣಾ ಯಂತ್ರಗಳನ್ನು ಖರೀದಿಸಲು ಅನುಮೋದನೆಗಾಗಿ ಸಲ್ಲಿಸಲಾಗಿದೆ.**

2 ಮತ್ತು 4 ಟನ್ ಸಾಮರ್ಥ್ಯದ ಬೀಜ ಸಂಸ್ಕರಣಾ ಯಂತ್ರವನ್ನು ಖರೀದಿಸಲು ಮಾನ್ಯ ಗೌರವಾನ್ವಿತ

ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯಲ್ಲಿ ಅನುಮೋದನೆ ಪಡೆದು ಸುಮಾರು ಮೂರು ಬಾರಿ ಟೆಂಡರ್ ಕರೆದರೂ ತಾಂತ್ರಿಕ ಬಿಡ್ಡಿನಲ್ಲಿ ಯಾರೊಬ್ಬರೂ ಅರ್ಹರಾಗಿರುವುದಿಲ್ಲ. ನಾಲ್ಕನೇ ಬಾರಿ ಟೆಂಡರ್ ಕರೆದಾಗ ಐದು ಬಿಡ್ಡುದಾರರು ಭಾಗವಹಿಸಿದ್ದು, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಆಹಾರ ತಂತ್ರಜ್ಞಾನ ವಿಭಾಗ, ಕೃವಿವಿ., ರಾಯಚೂರು ಇವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಮೌಲ್ಯಮಾಪನಕ್ಕೆ ರಚಿಸಲಾದ ಸಮಿತಿಯು ತಾಂತ್ರಿಕ ಮೌಲ್ಯಮಾಪನದಲ್ಲಿ ಓಸ್ವಾ ಆಗ್ರೋ ಇಂಡಸ್ಟ್ರೀಸ್, ಅಂಬಾಲಾ, ಹರಿಯಾಣ ಬಿಡ್ಡುದಾರರು ಮಾತ್ರ ಅರ್ಹತೆಯನ್ನು ಪಡೆದಿರುತ್ತಾರೆಂದು ಹಾಗೂ ಸಂಶೋಧನಾ ನಿರ್ದೇಶಕರು, ಕೃವಿವಿ., ರಾಯಚೂರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಂದಾನ ಸಮಿತಿಯು ಇವರೊಂದಿಗೆ ಸಂಧಾನ ಮಾಡಿದಾಗ ಕೋವಿಡ್–19 ನ 2ನೆಯ ಅಲೆಯಿಂದ ಸದರಿ ಯಂತ್ರಗಳ ಬಿಡಿಭಾಗಗಳ ಮತ್ತು ಇನ್ನಿತರ ವಸ್ತುಗಳ ಬೆಲೆಗಳು ಹೆಚ್ಚಳವಾಗಿರುವುದರಿಂದ ಉಪಕರಣಗಳ ಮೌಲ್ಯವು ಹೆಚ್ಚರಿವುದಾಗಿ ಕುಲಸಚಿವರು, ಕೃವಿವಿ., ರಾಯಚೂರು ಸಭೆಯ ಗಮನಕ್ಕೆ ತರುತ್ತಾರೆ.

**ಠರಾವು:**

ಚರ್ಚೆಯ ನಂತರ, ಎಲ್–1 ಬಿಡ್ಡುದಾರರಾದ ಓಸ್ವಾ ಆಗ್ರೋ ಇಂಡಸ್ಟ್ರೀಸ್, ಅಂಬಾಲಾ, ಹರಿಯಾಣ ಇವರಿಂದ ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಮೌಲ್ಯಕ್ಕೆ ಇ–ಟೆಂಡರ್ ಮುಖಾಂತರ ಈ ಕೆಳಕಂಡಂತೆ ಬೀಜ ಸಂಸ್ಕರಣಾ ಯಂತ್ರಗಳನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು:

| Sl. No | Name of the Item | Ab.A/c.No | Remarks |
|---|---|---|---|
| 01 | Seed processing plant along with accessories (2 ton Capacity) | 5045/701 "Creation of seed hub for enhancing quality seeds availability of major oil seed crops" funded by **Govt. of India** | During negotiation the firm reduced the quoted price From **Rs.36,35,749=00** to **Rs. 33,00,000=00** including all duties , taxes F.O.R. UAS Raichur. |
| 02 | Seed processing plant along with accessories (4 ton Capacity) | 5044/701 "Creation of seed Infrastructure facility-SMPS" funded by Govt. of India. | During negotiation the firm reduced the quoted price from **Rs.61,77,000=00** to **Rs. 53,50,000=00** including all duties and taxes F.O.R. UAS Raichur. |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಹೆಚ್ಚುವರಿ ಕಾರ್ಯಸೂಚಿಯ ವಿಷಯಗಳು**

**ಹೆಚ್ಚುವರಿ ಕಾರ್ಯಸೂಚಿ ಐಟಂ–1**

**ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ / ವಾಹನದ ಖರೀದಿಗೆ ಅನುಮೋದನೆ ನೀಡುವ ಕುರಿತು.**

ಕೃವಿವಿ., ರಾಯಚೂರಿನ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ಆರ್.ಕೆ.ವಿ.ವೈ. ಯೋಜನೆ "ರೋಬೋಟಿಕ್ ಮೂಲಕ ಆಟೋಮೇಷನ್" ಬಲಪಡಿಸುವ ಸಲುವಾಗಿ ಅವಶ್ಯವಿರುವ ವಾಹನ / ಉಪಕರಣದ ಅವಶ್ಯಕತೆ ಇರುವುದಾಗಿ ಕುಲಸಚಿವರು ಸಭೆಯ ಗಮನಕ್ಕೆ ತರಲಾಯಿತು.

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರತಿ ವಾಹನ / ಪ್ರಯೋಗಾಲಯದ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| Sl. No. | Name of the Equipment | Name of the Department/ Project | Qty | Approximate Cost in (Rs. Lakhs) | Funding Agency with allotted Ab. A/c. No. |
|---|---|---|---|---|---|
| 1. | Autonomous ground vehicle for agricultural operations | RKVY Project on Automation through Robotic, CAE, Raichur. | 01 set | 25.00 | 6785/701<br><br>RKVY Project on Automation through Robotic. |
| 2. | Self-Propelled High clearance boom sprayer | RKVY Project on Automation through Robotic, CAE, Raichur. | 01 set | 22.50 | 6785/701<br><br>RKVY Project on Automation through Robotic. |

**(ಕ್ರಮ : ಸರಕು ಖರೀದಿ ಅಧಿಕಾರಿ)**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು**

| | |
|---|---|
| 1 | ವಿಶ್ವವಿದ್ಯಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಕೃಷಿ ವಿಜ್ಞಾನಗಳ ಕೇಂದ್ರಗಳಲ್ಲಿ ರೈತರಿಗೆ ವಿವಿಧ ತರಬೇತಿಗಳನ್ನು ಹಮ್ಮಿಕೊಳ್ಳುತ್ತಿದ್ದು, ತರಬೇತಿ ಪಡೆದ ರೈತರೇ ಪುನರಾವರ್ತನೆಯಾಗುತ್ತಿದ್ದು, ಉಳಿದ ರೈತರಿಗೆ ಸದರಿ ಅವಕಾಶವನ್ನು ನೀಡುವ ಸಂಬಂಧ ಪುನರಾವರ್ತನೀಯತೆಯನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಸಲಹೆ ನೀಡಿದರು.<br>**(ವಿಸ್ತರಣಾ ನಿರ್ದೇಶಕರು)** |
| 2 | ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ನೀಡಲ್ಪಡುವ ಶ್ರೇಷ್ಠ ಕೃಷಿಕ ಹಾಗೂ ಕೃಷಿ ರತ್ನ ಪ್ರಶಸ್ತಿಗಳ ಆಯ್ಕೆಯ ಮಾರ್ಗಸೂಚಿಗಳನ್ನು ತಿದ್ದುಪಡಿಗೊಳಿಸಲು ವಿಶ್ವವಿದ್ಯಾಲಯದ ಒಂದು ಸಮಿತಿಯನ್ನು ರಚಿಸಿ, ಸೂಕ್ತ ಕ್ರಮ ಕೈಗೊಳ್ಳಲು ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಸಲಹೆ ನೀಡಿದರು.<br>**(ವಿಸ್ತರಣಾ ನಿರ್ದೇಶಕರು)** |
| 3 | ವಿಶ್ವವಿದ್ಯಾಲಯದ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗೆ ವರ್ಗಾವಣೆ ಮಾಡುವಲ್ಲಿ ಅನುಸರಿಸುತ್ತಿರುವ ನಿಯಮಾವಳಿಗಳನ್ನು ರಚಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಸಭೆಯ ಗಮನಕ್ಕೆ ತರಲಾಯಿತು.<br>**(ಕ್ರಮ : ಕುಲಸಚಿವರು / ರಾಜ್ಯ ಸಮನ್ವಯ ಸಮಿತಿ ಸಭೆ)** |
| 4 | ಪಲ್ಸ್ ಮ್ಯಾಜಿಕ್ ಉತ್ಪನ್ನದ ಲೆಕ್ಕಪತ್ರದ ಸಮಗ್ರ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಒದಗಿಸುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಸಭೆಯ ಗಮನಕ್ಕೆ ತರಲಾಯಿತು.<br>**(ಸಂಶೋಧನಾ ನಿರ್ದೇಶಕರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ/-20-12-2021 | ಸಹಿ/-20-12-2021 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ. ವೀರನಗೌಡ)**<br>ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ. ವೀರನಗೌಡ)**

ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ

ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.